ಪುಣ್ಯಕ್ಕೆ ನಮ್ಮತ್ತೆಗೆ ಮೂರನೇ ಕಣ್ಣಿಲ್ಲ ಸದ್ಯ. ಅದೇನಾದ್ರೂ ಇದ್ದಿದ್ರೆ ಅನ್ನಪೂರ್ಣಮ್ಮ ನಿಂತಿದ್ದ ಜಾಗ್ದಲ್ಲಿ ಒಂದು ಗುಪ್ಪೆ ಬೂದಿ ಇರ್ತಿತ್ತು! ನಮ್ಮತ್ತೆ ಬಾಯಿ ತೆಗೆಯುವ ಮುನ್ನ ಅವರೊಬ್ಬರನ್ನು ಬಿಟ್ಟು ಎಲ್ರೂ ಒಕ್ಕೊರಳಿನಿಂದ ಸಲಹೆಗೆ ಒಪ್ಪಿಗೆ ಕೊಟ್ಟುಬಿಟ್ರು. ಅನ್ನಪೂರ್ಣಮ್ಮ ಹಿಗ್ಗುತ್ತಾ ಒಳಗೆ ಅರಚಿಕೊಳ್ಳುತ್ತಿದ್ದ ಕುಕ್ಕರಿನ ಬಾಯ್ಮುಚ್ಚಿಸಲು ಒಳಹೋದರು. ಹಲ್ಲು ಕಚ್ಚುತ್ತಿದ್ದ ನಮ್ಮತ್ತೆ ಅನ್ನಪೂರ್ಣಮ್ಮನಿಗೆ ಸಿಕ್ಕ ಮನ್ನಣೆಗೆ ಬೇರೆಯೇ ರೂಪದಲ್ಲಿ ತಮ್ಮ ಅಸಮಾಧಾನ ಹೊರಹಾಕಿದರು. 'ಸಹಸ್ರನಾಮ ಪಾರಾಯಣ ಅಂದ್ರೆ ತಮಾಷೇನಾ? ಒಬ್ಬರು ಮುಂದಾಳತ್ವ ವಹಿಸಿಕೋಬೇಕು, ಜನರನ್ನು ಸಂಘಟಿಸಬೇಕು, ಸರಿಯಾದ ತರಬೇತಿ ಕೊಡಬೇಕು. ಅಷ್ಟೊಂದು ಛಾತಿ ಇರೋವ್ರು ಈ ಮನೇಲಿ ಯಾರಿದ್ದಾರೆ?'

ಈ ಕಾರಣಕ್ಕೇ ನನಗೆ ನಮ್ಮತ್ತೆ ಹಿಡಿಸೋಲ್ಲ. ಯಾವುದಕ್ಕೂ ನನ್ನನ್ನು ಗಣನೆಗೇ ತೊಗೊಳಲ್ಲ. ಅಲ್ಲಾ, ನನಗೆ ಅಷ್ಟು ಸಾಮರ್ಥ್ಯವಿಲ್ಲವೇ? ಅಷ್ಟೊಂದು ಗುಂಪುಗಾರಿಕೆ, ಭಿನ್ನಮತ, ತಗಾದೆಗಳಿರೋ ನಮ್ಮ ಮಹಿಳಾ ಸಮಾಜದಲ್ಲೇ ಮುಖ್ಯಸಂಚಾಲಕಿಯಾಗಿ ವಾರ್ಷಿಕೋತ್ಸವ ನಡೆಸಲಿಲ್ಲವೇ? ತಿಳಿದೂ ತಿಳಿದೂ ನನ್ನ ಸಾಮರ್ಥ್ಯವನ್ನು ಸಂದೇಹಿಸ್ತಾರಲ್ಲಾ! ಪುಣ್ಯಕ್ಕೆ ನನ್ನ ಗಂಡ ನನ್ನಪರ ವಕಾಲತ್ತು ವಹಿಸಿಕೊಂಡರು.

'ಏನಮ್ಮಾ? ನಿಮ್ಮೆದುರೇನೇ ಎಂಬತ್ತು ಕೆ.ಜಿ. ತೂಗುತ್ತಾ ಕಣ್ತುಂಬುವ ನಿನ್ನ ಸೊಸೆ ನಿಂತಿರೋವಾಗ ಯಾರಿದ್ದಾರೆ ಅಂತ ಕೇಳ್ತೀಯಲ್ಲಾ? ಹಿತ್ತಿಲ ಗಿಡ ಮದ್ದಲ್ಲಾಂತ ಇದಕ್ಕೇ ಹೇಳೋದು.' ಈ ರೀತಿ ಪರ ವಿರೋಧ ಚರ್ಚೆಯಾಗಿ ಅಂತೂ ಅದರ ಜವಾಬ್ದಾರಿ ನನ್ನ ಹೆಗಲಿಗೇರಿತು.

ನನಗೆ ಹತ್ತು ಭುಜಬಲ ಬಂದಂತಾಯ್ತು. ಸ್ನೇಹಿತರು, ಬಳಗದವರು, ಹಿತೈಷಿಗಳು ಎಲ್ಲರಿಗೂ ಕರೆ ಹೋಯಿತು. ಏನೇನೋ ನೆವಗಳ ನಡುವೆ ಸುಮಾರು ಇಪ್ಪತ್ತು ಜನ ಪಾರಾಯಣದಲ್ಲಿ ಪಾಲ್ಗೊಳ್ಳಲು ಒಪ್ಪಿದರು. ಜೊತೆಗೆ ನನ್ನ ಕುಟುಂಬದ ಸದಸ್ಯರೂ ಇದ್ದರಲ್ಲ!

ಅಷ್ಟು ಮಂದಿಗೂ ವಿಷ್ಣು ಸಹಸ್ರನಾಮದ ಝೆರಾಕ್ಸ್ ಪ್ರತಿಮಾಡಿ ಹಂಚಿದೆ. ಪ್ರತಿಯೊಬ್ಬರಿಗೂ ಬಿಡುವಿದ್ದಾಗ ಅದನ್ನು ಹೇಳಿಕೊಂಡು ಸ್ಪಷ್ಟವಾದ ಮತ್ತು ಸರಿಯಾದ ಉಚ್ಚಾರ ಅಭ್ಯಾಸ ಮಾಡಲು ಒತ್ತಾಯಿಸಿದೆ. ಕಿವಿಗಿಂಪಾದರೆ ಸಾಲದು ಕಣ್ಣಿಗೂ ತಂಪಾಗಬೇಕಲ್ಲಾ. ಮಹಿಳೆಯರಿಗೆ ಕೇಸರೀ ಸೀರೆ ಬಿಳಿ ರವಿಕೆಯಾದರೆ ಪುರುಷರಿಗೆ ಕೇಸರೀ ಜುಬ್ಬಾ ಬಿಳಿ ಪೈಜಾಮಾ ಎಂದು ನಿರ್ಧರಿಸಿದೆ. ಇದಕ್ಕೆ ನನ್ನ ಮಕ್ಕಳು ಬಂಡಾಯವೆದ್ದರು. 'ನಾನು ಕೇಸರಿ ಜುಬ್ಬ ಹಾಕಿದರೆ ಯಾರೋ ಸ್ವಾಮಿಗಳು ಅಂತ ಕಾಲಿಗೆ ಬಂದು ಬಿದ್ದಾರು. ನಾನು ಹಾಕೋದಿಲ್ಲ' ಎಂದ ಮಗ. 'ನನ್ನ ಮೈಬಣ್ಣಕ್ಕೆ ಕೇಸರಿ ಬಣ್ಣ ಒಪ್ಪೊಲ್ಲ. ನಾನು ಹಾಕೋಲ್ಲ' ಎಂದಳು ಅಲಂಕಾರಪ್ರಿಯೆಯಾದ ಮಗಳು. ಬೇರೆ ದಾರಿಯಿಲ್ಲದೆ ಹೊಂದಾಣಿಕೆ ಮಾಡಿಕೊಂಡೆ ಅನ್ನಿ.

ನಮ್ಮತ್ತೆ ಮನೆಗೆ ಸುಣ್ಣಬಣ್ಣ ಮಾಡಿಸಿದರು. ಪೀಠೋಪಕರಣಗಳಿಗೆಲ್ಲಾ ಪಾಲಿಷ್ ಲೇಪನವಾಯಿತು. ಪರದೆಗಳಿಗೆಲ್ಲಾ ಕಾಯಕಲ್ಪವಾಯಿತು. ತೆಂಗು ಕಂಗು, ತಾಳೆ ಬಾಳೆಗಳಿಂದ ಮನೆ ಸಿಂಗಾರಗೊಂಡಿತು. ನಮ್ಮ ಬಡಾವಣೆಯವರಿಗೆಲ್ಲಾ ಒಂದಕ್ಷರವೂ ಬಿಡದೆ ಕೇಳಿಸಲು ಧ್ವನಿವರ್ಧಕಗಳ ವ್ಯವಸ್ಥೆಯಾಯಿತು.

ವಿನಾಶಕಾಲೇ ವಿಪರೀತ ಬುದ್ಧಿಯಂತೆ! ನನ್ನ ಬುದ್ಧಿಯೂ ವಿಪರೀತ ಚುರುಕಾಯಿತು. ಸಾಮೂಹಿಕ ಪಠಣದಲ್ಲಿ ಎಲ್ಲರೂ ಒಂದೇ ರೀತಿ ಪಠಿಸಿದರೆ ಚೆನ್ನಲ್ಲವೇ? ಇದಕ್ಕಾಗಿ ಎಂ.ಎಸ್. ಸುಬ್ಬುಲಕ್ಷ್ಮಿಯವರ ವಿಷ್ಣುಸಹಸ್ರನಾಮದ ಸೀಡಿ ಹಾಕಿ ಅದನ್ನು ಮಾದರಿಯನ್ನಾಗಿಟ್ಟುಕೊಂಡು